ತೇಜಸ್ವಿ **ನೆನಪಿನ ದೋಣಿಯಲ್ಲಿ- 4**

ಪೂರ್ಣಚಂದ್ರ ತೇಜಸ್ವಿ ಕಥೆಗಳನ್ನು ಎಷ್ಟು ಸಲ ಬೇಕಾದರೂ ಓದಬಹುದು, ಬೋರಾಗೋದಿಲ್ಲ. ಹಾಗೆಯೇ ಅವರ ನೆನಪುಗಳು; ಮೊಗೆದಷ್ಟೂ ಮೇಲಕ್ಕೆ ಬರುತ್ತವೆ. ಮೂಡಿಗೆರೆಯಲ್ಲಿ ಅವರೊಂದಿಗೆ ಒಡನಾಡಿದ ಕೆಲವು ಅಪರೂಪದ ಪ್ರಕರಣಗಳು ಇಲ್ಲಿವೆ..

# ‘ನಾನು ನಿಮ್ಮಾಗೇ ಮನುಷ್ಯ ಕಣ್ರಯ್ಯಾ’

ತೇಜಸ್ವಿಯವರು ನಮ್ಮೆಲ್ಲರಿಗಿಂತ ಮುಂದೆ ಹೋಗಿ ಕೊಂಡಕ್ಕೆ ಗಾಣ ಎಸೆದು ಗಾಢ ಮೌನಕ್ಕೆ ಶರಣಾಗಿ ತಪಸ್ವಿಯಂತೆ ತದೇಕಚಿತ್ತರಾಗಿ ಹೊಳೆಯ ಹರಿವನ್ನೇ ನೋಡುತ್ತಾ ಬಂಡೆಗಳೊಂದಿಗೆ ಬಂಡೆಯಾಗಿಬಿಟ್ಟರು.

■ **ಧನಂಜಯ ಜೀವಾಳ ಬಿ.ಕೆ.**

‘ನಿರುತ್ತರ’ ಮನೆಯ ಮುಂಭಾಗದ ಕೊರಕಲಿನಲ್ಲಿ ಹರಿಯುವ ಚಿಕ್ಕ ತೊರೆಯಲ್ಲಿ ಗಾಣಕ್ಕೆ ಸಿಕ್ಕಿಸಲು ಬೇಕಾದ ಏಡಿಗಳನ್ನು ಹಿಡಿದು ತೆಗೆದಿಟ್ಟುಕೊಂಡು ರಾಘವೇಂದ್ರ, ಬಾಪು ದಿನೇಶ್, ತೇಜಸ್ವಿಯವರು ಮತ್ತು ನಾನು ಸ್ಕೂಟರಿನಲ್ಲಿ ಗಾಣ ಹಿಡಿದುಕೊಂಡು ಖಾಂಡ್ಯದಲ್ಲಿನ ಭದ್ರಾ ನದಿ ದಂಡೆಯನ್ನು ಸೇರಿದೆವು. ನಿಸರ್ಗವೇ ಕಡೆದಿಟ್ಟ ಶಿಲ್ಪಗಳಾದ ಆ ಬೃಹತ್ ಕಲ್ಲುಗಳ ಆಕೃತಿಗಳನ್ನು ಮನಸಾರೆ ಪ್ರಶಂಸಿಸುತ್ತಾ ಗಾಣಗಳನ್ನು ಸಿದ್ದ ಮಾಡಿಟ್ಟುಕೊಂಡೆವು. ತೇಜಸ್ವಿಯವರ ಬಳಿ ವಿದೇಶಿ ತಂತ್ರದ ವಿಶೇಷ ಪಳಪಳ ಹೊಳೆಯುವ ತುದಿಯ ಗಾಣವೊಂದಿತ್ತು. ಅದರ ವಿಶೇಷವನ್ನು ವಿವರಿಸಿ ಸುಂಯ್ ಎಂದು ಹೊಳೆಗೆ ಎಸೆದು, ‘ನೋಡ್ತಿರು.. ಎಂತೆಂಥಾ ಮೀನು ಹೆಂಗ್ ಹೊಡೀತಾವೆ’ ಎಂದರು. ಒಂದೂವರೆ ಗಂಟೆಯಾದರೂ ಏನೂ ಪ್ರಯೋಜನವಾಗಲಿಲ್ಲ.

ಬಿಸಿಲು ಸರಸರನೆ ಏರುತ್ತಿತ್ತು. ಕಲ್ಲು ಬಂಡೆಗಳ ಬಿಸಿ ನೇರವಾಗಿ ರಾಚುತ್ತಿದ್ದ ಬಿರುಬಿಸಿಲನ್ನು ತಾಳಲಾರದೆ ‘ಇಲ್ಲೇ ಸ್ವಲ್ಪ ಮುಂದೆ ಈ ಹಿಂದೆ ಗಾಣ ಹಾಕಿದ್ದ ಸ್ಥಳವಿದೆ. ನಡೀರಿ ಅಲ್ಲಿ ಸ್ವಲ್ಪ ನೆರಳಾದ್ರೂ ಇರುತ್ತೆ’ ಅಂದರು. ಅಲ್ಲಿಂದ ಸುಮಾರು 2 ಕಿ.ಮೀ. ದೂರದ ಹೊಳೆಯ ಕೆಳಭಾಗಕ್ಕೆ ಹೋಗಿ ಗಾಣ ಹಾಕಿಕೊಂಡು ಹೊಳೆಯ ಬದಿಯ ನೆರಳಿನಲ್ಲಿ ನಿಶ್ಚಲವಾಗಿ ಕುಳಿತೆವು.

ಹೊಳೆಯ ಆಚೆ ಬದಿಯ ಬಿದಿರು ಮೆಳೆಗಳ ನೋಟ ಅಪ್ಯಾಯಮಾನವಾಗಿತ್ತು. ಹೊಳೆ ಅಲ್ಲಿ ಕಿರಿದಾಗಿ ರಭಸವಾಗಿ ಹರಿಯುತ್ತಿತ್ತು. ಆಚೆ ಬದಿಯಲ್ಲಿ ಹಿಂದಿನ ದಿನ ಆನೆಗಳು ಓಡಾಡಿದ ಚಹರೆ ಇತ್ತು. ತೇಜಸ್ವಿಯವರು ನಮ್ಮೆಲ್ಲರಿಗಿಂತ ಮುಂದೆ ಹೋಗಿ ಕೊಂಡಕ್ಕೆ ಗಾಣ ಎಸೆದು ಗಾಢ ಮೌನಕ್ಕೆ ಶರಣಾಗಿ ತಪಸ್ವಿಯಂತೆ ತದೇಕಚಿತ್ತರಾಗಿ ಹೊಳೆಯ ಹರಿವನ್ನೇ ನೋಡುತ್ತಾ ಬಂಡೆಗಳೊಂದಿಗೆ ಬಂಡೆಯಾಗಿಬಿಟ್ಟರು.

ರಾಘವೇಂದ್ರರು ತಂದಿದ್ದ ಪಾಕೆಟ್ ರೇಡಿಯೋದಲ್ಲಿ ನಾನು ಮತ್ತು ಬಾಪೂ ಯಾವ್ಯಾವುದೋ ಸ್ಟೇಷನ್‌ಗಳನ್ನು ತಲಾಷ್ ಮಾಡುತ್ತಿದ್ದೆವು. ಕೇಳರಿಯದ ಭಾಷೆಯ ಸಂಭಾಷಣೆಗಳು, ಹಿಂದಿ ಗೀತೆಗಳನ್ನು ಕೇಳಲು ಸರ್ಕಸ್ ಮಾಡಲಾರಂಭಿಸಿದೆವು. ನಿಶ್ಯಬ್ದತೆಯ ನಿರೀಕ್ಷೆಯಲ್ಲಿದ್ದ ತೇಜಸ್ವಿಯವರಿಗೆ ಕಿರಿಕಿರಿಯಾಯ್ತೆಂದು ಕಾಣಿಸುತ್ತೆ. ನಮ್ಮೆಡೆಗೆ ತಿರುಗಿ ನೋಡಿದ್ದು ಕಾಣಿಸಿತು. ತಕ್ಷಣ ರೇಡಿಯೋದ ಜೊತೆಗೆ ನಮ್ಮ ಹಿಂದು ಮುಂದೆಲ್ಲವನ್ನೂ ಬಂದ್ ಮಾಡಿಕೊಂಡು ನಾವೂ ಕೊರಡಾದೆವು.

ಯಾವುದೋ ಅನಂತ ವಿಶ್ವದ ಕಲ್ಪನೆಯಲ್ಲಿ ಗಾಢವಾದ ವಿಚಾರ ಲಹರಿಯನ್ನು ತೇಲಿಬಿಟ್ಟು ವಾಸ್ತವ ಜಗತ್ತಿನ ಮೂರ್ತತೆಯನ್ನು ಸಾಕಾರಗೊಳಿಸಿಕೊಳ್ಳುವ ಕಾಷ್ಠ ಮೌನ ಮತ್ತು ಅನುಭಾವದೊಂದಿಗೆ ಜೀವನ ದರ್ಶನದತ್ತ ಹೊರಟಿದ್ದ ತೇಜಸ್ವಿಯವರನ್ನು ನಾವು ಡಿಸ್ಟರ್ಬ್ ಮಾಡಲು ಹೋಗಲೇ ಇಲ್ಲ. ಇದ್ದಕ್ಕಿದ್ದಂತೆ ‘ಈ ಕುದುರೆಮುಖದವರು ಈ ಹೊಳೇಲೆಲ್ಲ ಕೆಸರು ಕದಡಿ ಕಳುಹಿಸುತ್ತಿದ್ದಾರಲ್ಲಾ.. ನೋಡಿ, ನೀರಿನ ಬಣ್ಣ ಹೇಗಿದೆಯಂತ, ಹೀಗಾದ್ರೆ ಮೀನೆಲ್ಲಿರ್ತಾವೆ? ಸಾಯ್ಲಿ ನಡೀರಿ. ರಘು ಟೈಂ ಎಷ್ಟು?’ ಎಂದರು.





‘ಟೈಮು... ನಾಲಕ್ ಗಂಟೆ’

‘ಅರೆ! ಎಷ್ಟು ಹೊತ್ತು ಆಯ್ತಲ್ಲಾ ಮಾರಾಯ್ರ. ಹೊಟ್ಟೆಗೂ ಏನೂ ಹಾಕಿಲ್ವಲ್ರೋ.. ನಡೀರಿ ಹೋಗೋಣ’

ಎಂದು ಬೆಳಿಗ್ಗೆ ನಾವು ಬಂದಿದ್ದಾಗ ಏನು ಹುರುಪು, ಚೈತನ್ಯದಿಂದಿದ್ದರೋ, ಸಂಜೆ ನಾಲ್ಕು ಗಂಟೆಯಲ್ಲೂ ಖಾಲಿ ಹೊಟ್ಟೆಯಲ್ಲೂ ಅದೇ ತೇಜಸ್ಸು, ಹುಮ್ಮಸ್ಸಿನಿಂದ ನಮ್ಮನ್ನು ಹುರಿದುಂಬಿಸಿದರು. ನಮ್ಮ ಮುಖವೆಲ್ಲ ಹೊಟ್ಟೆಗೆ ಹಿಟ್ಟಿಲ್ಲದೇ ಬಾಡಿ ಬೆಂಡೆದ್ದು ಹೋಗಿತ್ತು.

ಸಾಹಸಿ ಕಾರ್ಯಗಳಲ್ಲಿ ಯುವಕರನ್ನೂ ನಾಚಿಸುತ್ತಾ ಚಿಲುಮೆಯಾಗಿದ್ದ ತೇಜಸ್ವಿಯವರು ಸ್ವಚಿಕಿತ್ಸೆ ಮಾಡಿಕೊಳ್ಳಲು ಮೈಸೂರಿನ ಆಸ್ಪತ್ರೆ ಸೇರಿದ ನಂತರ ಹೊರಗೆ ತಿರುಗುವ ಮುಂಚಿನ ಕಸುವನ್ನು ಕಳೆದುಕೊಂಡಂತೆ ಕಾಣಿಸುತ್ತಿದ್ದರು. ದೇಹ ಸೋತಿದ್ದರೂ ಅವರ ಮನೋಬಲ ಅಗಾಧವಾದದ್ದು.

ಕಾಡು ಸುತ್ತುವುದು, ಪಕ್ಷಿ ವೀಕ್ಷಣೆ, ಛಾಯಾಗ್ರಹಣ, ಮೀನು ಶಿಕಾರಿ, ಮುಲಾಜಿಲ್ಲದ ಬದುಕು. ಖಂಡ ತುಂಡ ವೈಚಾರಿಕತೆಯನ್ನು ಮುಂಚಿನಿಂದಲೂ ಮೈಗೂಡಿಸಿಕೊಂಡಿದ್ದ ತೇಜಸ್ವಿ ‘ಯಾವುದೇ ಕಟ್ಟುಪಾಡುಗಳ ಹೊರತಾಗಿ ಬದುಕುತ್ತಿರುವುದರಿಂದ ನನ್ನ ಅಗತ್ಯ, ನನ್ನ ಕಲ್ಪನೆ, ನನ್ನ ಸಾಧ್ಯತೆಗಳಿಗೆ ಅನುಗುಣವಾಗಿ ನಾನು ತಿಳಿದಂತೆ, ಬಯಸಿದಂತೆ ಬದುಕಲು, ಬರೆಯಲು ಅಭಿವ್ಯಕ್ತಿಗೊಳಿಸಲು ಸಾಧ್ಯವಾಗಿದೆ’ ಎನ್ನುತ್ತಿದ್ದರು.

ಯಾರೂ ತನ್ನನ್ನು ಆರಾಧನಾ ಭಾವದಿಂದ ಕಾಣುವುದನ್ನು ಸಹಿಸುತ್ತಿರಲಿಲ್ಲ ಆ ಸ್ವಾಭಿಮಾನಿ. ಒಮ್ಮೆ ಏನಾಯಿತೆಂದರೆ ನಮ್ಮ ನೇಚರ್ ಕ್ಲಬ್‌ನಿಂದ ದೇವರಮನೆ ಕಾಡಿಗೆ ಸ್ನೇಹಿತರೆಲ್ಲಾ ಟ್ರೆಕ್ಕಿಂಗ್ ಹೋಗುವುದು, ಅಲ್ಲಿ ಟೆಂಟ್ ಹಾಕಿ ರಾತ್ರಿ ತಂಗುವುದೆಂದು ನಿರ್ಧಾರವಾಯಿತು.

ಹ್ಯಾಂಡ್‌ಪೋಸ್ಟ್‌ನಲ್ಲಿ ಎಲ್ಲಾ ಸೇರಿಕೊಂಡು ಜೀಪ್‌ನಲ್ಲಿ ಹೋಗಿ ನಂತರ ಚಾರಣ ಪ್ರಾರಂಭಿಸುವುದು ಎಂದು ಅಡುಗೆ ಭಟ್ಟರಾಗಿ ಸುಬ್ರಹ್ಮಣ್ಯರನ್ನು ಕರೆದುಕೊಂಡೆವು. ತೇಜಸ್ವಿಯವರು, ಅವರ ಶ್ರೀಮತಿ ರಾಜೇಶ್ವರಿಯವರು, ಅಳಿಯ ಜ್ಞಾನೇಶ್ ಸಹ ನಮ್ಮ ಗುಂಪನ್ನು ಸೇರಿಕೊಂಡರು.

ಕ್ಯಾಮರಾ, ಬಟ್ಟೆಬರೆ ಇತರೆ ವಸ್ತುಗಳಿದ್ದ ತೇಜಸ್ವಿಯವರ ಬ್ಯಾಗ್ ಸಾಕಷ್ಟು ತೂಕವಿದ್ದಂತೆ ಕಂಡಿತು. ‘ಬ್ಯಾಗ್ ಕೊಡಿ, ದೂರದಲ್ಲಿ ನಿಂತಿದ್ದ ಜೀಪಿಗೆ ಇಡ್ತೀನಿ’ ಎಂದು ಅವರ ಕೈನಲ್ಲಿ ಬ್ಯಾಗ್ ಇಸ್ಕೊಳ್ಳಲು ಹೊರಟರೆ ‘ನಮ್ಗೇನು ಕೈಕಾಲು ಇಲ್ಲಾಂತ ತಿಳ್ಕಂಡಿದ್ದೀಯಾ? ನನ್ನ ಕೈಕಾಲು ಗಟ್ಟಿ ಇದಾವೆ ಕಣ ಮಾರಾಯಾ, ನಾನು ನಿಮ್ಮಾಗೇ ಮನುಷ್ಯ ಕಣ್ರಯ್ಯಾ’ ಎಂದು ಗದರಿಸಿ ಬ್ಯಾಗ್ ಎತ್ತಲೂ ಸಹ ಬಿಡಲಿಲ್ಲ. ದೇವರಮನೆಯಲ್ಲೂ ಸಹ ಜೀಪಿನವ ನನ್ನ ಜೊತೆ ಚೌಕಾಸಿ ಮಾಡುವಾಗ ‘ಏ.. ಒಂದು ನೂರು ರೂಪಾಯಿ ಜಾಸ್ತಿ ಕೊಟ್ಟು ಕಳಿಸ್ರಯ್ಯಾ.. ಅವರದೆಂತಾ ಕಿರಿಕಿರಿ’ ಎಂದಿದ್ದರು.

ಬರವಣಿಗೆ, ಡ್ರೈವಿಂಗ್, ಫೋಟೋಗ್ರಫಿ ಹೇಗಿರಬೇಕೆಂದು ಸಂದರ್ಭ ಸಿಕ್ಕಿದಾಗಲೆಲ್ಲಾ ತಿಳಿ ಹೇಳುತ್ತಿದ್ದ ತೇಜಸ್ವಿ ತಮ್ಮ ಕೊನೆಯ ಕೃತಿ ‘ಮಾಯಾಲೋಕ’ದಲ್ಲಿ ನಾನು ನನ್ನ ಕ್ಯಾಮರಾದಲ್ಲಿ ತೆಗೆದ ಮೂರ್‍ನಾಲ್ಕು ಚಿತ್ರಗಳನ್ನು ಬಳಸಿಕೊಂಡಿರುವುದು ನನ್ನ ಮೇಲಿನ ಅವರ ವಿಶ್ವಾಸದ ಪ್ರತೀಕ. ಹೂವಿನೊಡನೆ ನೋಣವೂ ಸ್ವರ್ಗಕ್ಕೆ ಹೋದಂತಾಗಿದೆ. ಪತ್ರಿಕೆಯಲ್ಲಿ ಪ್ರಕಟವಾದ ನನ್ನ ಶಿಕಾರಿ ಮಾಲಿಕೆಯನ್ನು ಓದಿ ಸಲಹೆ ನೀಡಿ ಬೆನ್ನು ತಟ್ಟಿದ ಸ್ಪರ್ಶ ಇನ್ನೂ, ಈಗಲೂ ಹಾಗೂ ಎಂದೆಂದಿಗೂ ನನ್ನೊಡನಿರುತ್ತದೆ.

ಬಿಟ್ಟೂ ಬಿಡದೆ ಕಾಡುವ ತೇಜಸ್ವಿ ಸಿಕ್ಕಿದಾಗಲೆಲ್ಲಾ ‘ನನ್ನ ಸಮಯ ಹಾಳು ಮಾಡ್ತಿದ್ರಲ್ಲಾ ಈಗೇನ್ಮಾಡ್ತೀರಾ? ಹಾಗ್ಮಾಡ್ತೀವಿ, ಹೀಗ್ಮಾಡ್ತೀವಿ ಅಂತಿದ್ರಲ್ಲಾ, ಈಗ ಪುರುಸೊತ್ತಿದೆ, ನೋಡ್ತಾನೆ ಇರ್ತೀನಿ ಏನ್ ಕಡಿದು ದಬ್ಬಾಕ್ತೀರಾ ಅಂತ..’ ಎಂದಂತೆ ಭಾಸವಾಗುತ್ತಿದೆ. ಅತ್ಯಂತ ಪ್ರಯೋಗಶೀಲರಾದ ತೇಜಸ್ವಿ ಸ್ಕೂಟರ್, ನೀರೆತ್ತುವ ಮೋಟಾರ್, ಕಂಪ್ಯೂಟರ್‌ನಂತ ಯಂತ್ರಗಳನ್ನು ತಾವೇ ದುರಸ್ತಿ ಮಾಡುವ ಸಾಹಸಕ್ಕೆ ಕೈ ಹಾಕುತ್ತಿದ್ದರು.

ಆಗಾಗ ಕೈಕೊಡುತ್ತಿದ್ದ ನನ್ನ ಹಳೇ ನರ್ಮದಾ ಸ್ಕೂಟರ್‌ನ ‘ರಿಪೇರಿಗಾಗಿ ವರ್ಕ್‌ಶಾಪ್‌ಗೆ ತಗೊಂಡು ಹೋಗ್ತೀನಿ’ ಎಂದರೆ ‘ಸ್ಕೂಟರ್‌ನಂತ ವೆಹಿಕಲ್ ಯೂಸರ್ ಫ್ರೆಂಡ್ಲಿ ಕಣಯ್ಯಾ, ಸರ್ವೇ ಸಾಮಾನ್ಯ ರಿಪೇರಿಗಳನ್ನೆಲ್ಲಾ ನಾವೇ ಮಾಡಿಕೊಳ್ಳಬಹುದು, ಅದನ್ನೂ ಗ್ಯಾರೇಜಿಗೆ ತಗೊಂಡು ಹೋಗ್ತೀಯಾ? ಆಯೋಗ್ಯ’ ಎಂದು ಛೇಡಿಸಿದ್ದು ಇನ್ನೂ ಹಸಿರಾಗಿದೆ.

ಕುವೆಂಪುರವರ ಭಾವನೆ ಹಾಗೂ ಕಾರಂತರ ಶೋಧನೆಗಳ ಸಮರ್ಥ ಸಂಯೋಜನಗಳೇ ಅತ್ಯಂತ ಸಹಜವೆಂಬಂತೆ ಕ್ರಿಯಟಿವ್ ಆಗಿ ಹೊರಹೊಮ್ಮಿರುವ ಸೆನ್ಸಿಬಲ್ ಹಾಗೂ ಪ್ರಾಕ್ಟಿಕಲ್ ಹಾಗೂ ದಾರ್ಶನಿಕ ತೇಜಸ್ವಿ, ನಾನೇರಿದೆತ್ತರಕ್ಕೆ ಅವನೇರಬಲ್ಲನೇ ಎಂದ ಕುವೆಂಪುರವರ ಮಾತಿಗೆ ಸಂವಾದಿಯಾಗಿ ನಾ ಮುಳುಗಿದಾಳಕ್ಕೆ ಕುವೆಂಪು ಮುಳುಗಬಲ್ಲರೇ ಎಂಬುದು ಅವರ ಜ್ಞಾನದ ಆಳವನ್ನು ತೋರಿಸುತ್ತದೆ. ಲೋಹಿಯಾರ ತತ್ವಚಿಂತನೆ, ಕುವೆಂಪುರವರ ಕಲಾಸೃಷ್ಟಿ ಹಾಗೂ ಕಾರಂತರ ಪ್ರಯೋಗಶೀಲತೆಯ ಸಾಕಾರಮೂರ್ತಿಯಾಗಿದ್ದ ತೇಜಸ್ವಿ ಭೂಮಾಲೀಕರ, ಕೂಲಿ ಕಾರ್ಮಿಕರ ನಡುವಿನ ಸೂಕ್ಷ್ಮವಾದ ಸಂಬಂಧವನ್ನು ಅತ್ಯಂತ ಜಾಣ್ಮೆಯಿಂದ ತಮ್ಮ ಬರವಣಿಗೆಯಿಂದ ಹೊರಗಿಟ್ಟಿದ್ದರು ಎಂದೇ ನನಗನ್ನಿಸುತ್ತೆ. ಜನಾಭಿಪ್ರಾಯ ಇಬ್ಭಾಗವಾಗುವಂತಹ ಯಾವುದೇ ವಿಚಾರವನ್ನೂ ಪ್ರಸ್ತಾಪಿಸುತ್ತಿರಲಿಲ್ಲ.

**(ಮುಂದಿನ ವಾರ: ‘ಥುತ್! ಪೊಲೀಸ್ ಇಟ್ಕೊಂಡು ಹಬ್ಬ ಮಾಡ್ಬೇಕಾ?’)**



www.tejaswivismaya.com